ಎಂದ. “ಅನಂತಣ್ಣ, ನಂದೆಲ್ಲ ಪುಂಖಾನುಪುಂಖ ಹೇಳಿ ಬಿಡ್ತೆ ಇಂದು. ಖರೆಗೂ ನನಗೆ ಭಯಂಕರ ಬೇಜಾರೈದೊ; ಜೀವನಾ ಸಾಕಾಯ್ದೊ; ಮನೇಲಿ ಕೂತು ಮಾತಾಡೊ ಹಕೀಕತ್ತಲ್ಲ” ಎನ್ನುತ್ತಲೆ ಪುಂಡಲೀಕ ಗಲೀಜು ಕರ್ಟನ್ ಸರಿಸಿ ಬಿಳಿಕೂದಲ ರುಂಡ ತೂರಿದ್ದನ್ನು ನೋಡಿದ; ದತ್ತು ಒಂದು ಅರ್ಧ ಗ್ಲಾಸ್ ಎಂದು ಅಂಗೈ ಸನ್ನೆಯ ಮೂಕಾಭಿನಯದಲ್ಲಿ ಸಂದೇಶ ಕಳುಹಿಸಿದ; “ನನಗೆ ನಾನ್‌ವೆಜ್ ರೂಢಿಯಿದ್ದು. ನೀನು ಶುದ್ಧ ಶಾಕಾಹಾರಿ ಬ್ರಾಹ್ಮಣ ಬಿಡು; ಖಾಲಿ ರೈಸ್ ಪ್ಲೇಟ್ ಹೇಳ್ತೆ; ವೆಜ್ ಮತ್ತೆ ನಾನ್‌ವೆಜ್ ಸಪರೇಟ್ ಮಾಡ್ತೊ ಇಲ್ಲಿ. ಸೌಟು ಸಹಿತ ಒಂದೇ ಅಲ್ಲ.” ಎಂದ. ಅದಾಗಲೆ ಊಟ ಮಾಡಿ ಎದ್ದು ಹೋದವರ ತಾಟಿನಲ್ಲಿದ್ದ ಮೀನಿನ ಮುಳ್ಳು ನೋಡುತ್ತ ಅನಂತನಿಗೆ ಮುಜುಗರವಾಗುತ್ತಿರುವುದನ್ನು ಗಮನಿಸಿ, “ಎಟ್‌ಲೀಸ್ಟ್ ಇಡ್ಲಿ ಸಾಂಬಾರು” ಎಂದು ಕಬೂಲಿ ಪಡೆದ. ಅನಂತ ಸೆಖೆಗೆ ತಿಣುಕುವುದು ನೋಡಿ ಪಂಖ ಹಾಕಿದ. ಸಣ್ಣ ಹೊಗೆ, ಘಾಟು ಪರಿಮಳ; ಪಂಖ ಹಿಟ್ಟಿನ ಗಿರಣಿಯಂತೆ ಸದ್ದು ಮಾಡುತ್ತ ಜೋಲಿ ತಪ್ಪಿ ತಿರುಗಿತು; ಪುಂಡಲೀಕ ದಪ್ಪ ಗ್ಲಾಸಿನರ್ಧ ಜೇನು ಬಣ್ಣದ ಖಡಕ್ ಮಾಲು ತಂದಿಟ್ಟ. “ಶೆಟ್ರೆ, ನಿಮ್ಮ ಪಂಖಕ್ಕೆ ಅಮ್ಲು ಹೆಚ್ಚಾಗದೆ ನೋಡಿ” ಎಂದ. ಪುಂಡಲೀಕನ ಸಂಕೋಚಗೊಂಡ ಹಣೆಯ ನಿರಿಗೆ ಮತ್ತು ಅವನ ಬೆರಳ ತುದಿಯ ಕುತೂಹಲ ಇವರು ಯಾರೆಂದು ಅನಂತನ ಗುರುತು ಪತ್ತೆ ಮಾಡುವ ಮುದ್ರೆಯಲ್ಲಿರುವಾಗ ದತ್ತು, “ಅನಂತನೇ, ಈಗ ಮಾಸ್ತರು ಅವರು” ಎಂದ. “ಸರ್ ಆಗಿದ್ದಾರೊ ಚಲೋ ಆಯ್ತು, ನಮಸ್ಕಾರ” ಪುಂಡಲೀಕ ಕೈಮುಗಿದ.

ಎರಡೇ ಗುಟುಕಿಗೆ ಗ್ಲಾಸನ್ನು ಖಾಲಿ ಮಾಡಿ ಬೋರಲು ಹಾಕಿದ; “ಗಾಂಪ್ಟಿ ಮಾಲು, ಗೇರಣ್ಣೆಂದು” ಎಂದು ಮುಂಗೈಯಲ್ಲಿ ಬಾಯಿ ಒರೆಸಿದ. ಮಾತಾಡಿದಾಗಲೆಲ್ಲ ಅವನ ಉಸಿರಿಂದ ಹುಳಿ ವಾಸನೆ ಸೂಸುತ್ತಿತ್ತು.

“ಮದ್ವೆ ಯೋಗ ನನಗೆ ಈ ಜನ್ಮದಲ್ಲಿ ಇಲ್ಲೆ ಬಿಡು; ಹೆಣ್ಣ ಅನುಭೋಗ್ಲೊ ಯೋಗ ಈ ದೇಹಕ್ಕಿದ್ದಾಂಗಿಲ್ಲೆ; ಅಪ್ಪಿಯಕ್ಕ ಮಾಡಿದ್ದು ಸರಿ, ತನಗೆ ಬೇಕಾದವರೆ ಜೊತೆ ಸುಖ ಪಟ್ಟತ್ತು; ಒಂದೊಂದು ಸಲ ತಲಬು ಬಂದಾಗ ಯಾರಾದ್ರೂ ಸಾಕು ಮಲಗೋದಕ್ಕೆ ಅಂತನಸ್ತು; ಧೈರ್ಯ ಮಾಡ್ತಿದ್ದೆ ಅಷ್ಟರಲ್ಲಿ ಎದ್ರಿಗೆ ಅಕ್ಕ ಬಂದು ಕೂತು ಬಿಡ್ತು; ಮಾನ, ಮರ್ಯಾದೆ, ಮನೆತನದ ವಿಚಾರ ಬಂದು ಅಸಹ್ಯ ಕಾಣ್ತು; ‘ನಮ್ಮನೆ ತಮ್ಮ ಬೇರೆ ಹುಡಗರಾಂಗೆ ಇಷ್ಟು ವರ್ಷಾದ್ರೂ ದಾರಿ ತಪ್ಪಿದ್ನಿಲ್ಲೆ’ ಎಂದು ಮರ್ಯಾದೆ ಗೆರೆ ಎಳ್ದು ಹೊಗಳಿದ್ದೇ ನನ್ನ ಸಂಕಟ ಹೆಚ್ಚಾತು; ಇವರೆಲ್ಲ ಸಾವಿರಾರು ಸಲ ಹಾಸಿಗೇಲಿ ಆಟ ಆಡಿದವ್ರೇ; ಮ್ಯಾಟ್ನಿ ಆಟ ಹಿಡಿದು ದಿನಾ ಮೂರು ಶೋ ಇವರದ್ದು. ಮದ್ವೆ ಆಗದಿದ್ರೆ ನನ್ನ ತಪ್ಪಾ? ನಂದೂ ಉಪ್ಪು–ಹುಳಿ ಉಂಡ ದೇಹವೇ; ನಂದೂ ಅಂತ ಒಂದು ಜೀವದ ಕುಡಿ ಇರದೆ ವಂಶದ ಕೊನೆಯಾಗಿ ಹೋಗ್ತಲೊ; ಕೊನೆಗೂ ನಾನು ಏಕಾಂಗಿಯೇ; ನೀವೆಲ್ಲ ಸುಖಪುರುಷರೋ; ಎಷ್ಟು ಚಂದದ ಹೆಣ್ತಿ! ಅದಾಗ್ಲೆ ಎರಡು ಮಕ್ಕಳ ಅಪ್ಪ ನೀನು! ಅನಂತಣ್ಣ, ನಮ್ಮನೆ ವಾತಾವರಣ ಹ್ಯಾಂಗಿತ್ತು ನಾನು ಹ್ಯಾಂಗೆ ದೊಡ್ಡಂವಾದೆ ಎಲ್ಲ ನಿನಗೆ ಗೊತ್ತಿದ್ದು; ನನ್ನ ಸದ್ಯದ ಗೊಂದಲ, ಹೊಯ್ದಾಟಕ್ಕೆ ಮನೆ ವಾತಾವರಣವೇ ಕಾರಣ; ಆ ವಾತಾವರಣದಿಂದ ಹೊರ್ಗೆ ಬಪ್ಪೂಲೆ ದಾರಿ ತೋರ್ಸೊರ್ಗೆ...” ಬಿಕ್ಕಿ ಬಿಕ್ಕಿ ಅಳತೊಡಗಿದ.

ನೆಶೆಗೆ ಕೆಂಪಾದ ಮುಖ ಕಿವಿಚಿ ಅತ್ತು ವಿಕಾರ ಕಂಡ; ಅನಂತನಿಗೆ ಏನು ತೋಚದೆ ರೆಪ್ಪೆಗಳು ಪಟಪಟ ಬಡಿದುಕೊಂಡವು; “ಎರಡೂಟ ಅಲಾ” ಹೆಣ್ಣು ಸ್ವರ ಹೊರಟಿತು; “ಅಲ್ಲಾ ಒಂದೂಟ ಮತ್ತೆ ಒಂದು ಪ್ಲೇಟ್ ಇಡ್ಲಿ ಸಾಂಬಾರ್... ಭಾರತಿ ಬಾ ಇಲ್ಲಿ...” ತೊದಲಿದ. “ನಾನು ಭಾರತಿ ಅಲ್ಲ” ಎಂದು ಸೊಂಟ ಕುಣಿಸಿ ಲಲ್ಲೆಗೆರೆದು ಮಾಯವಾದಳು; “ಹಾಂಗಾದ್ರೆ ಮಾಲತಿ...” ಮತ್ತೆ ಕರೆದ; ಲಂಗದವಳು ಬಾಗಿಲಿಂದ ಇಣುಕಿದಳು; “ನಾನು ಭಾರತಿ...” ಕಿಸಕ್ಕನೆ ನಕ್ಕು ಮರೆಯಾದಳು;